**Com.O.S.** 266/2023
**PW**-1

**ಸಾಕ್ಷಿಯನ್ನು ದಿನಾಂಕ 16.10.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀಮತಿ ಎಸ್.ಯು ವಕೀಲರಿಂದಃ**

ಪ್ರತಿವಾದಿ ಸಂಸ್ಥೆಯ ಏರಿಯಾ ಸೇಲ್ಸ ಮ್ಯಾನೇಜರ್ ಮೂಲಕ ಪ್ರತಿವಾದಿಯ ಪರಿಚಯವಾಗಿದೆ. ನಾನು ಪ್ರಾವಿಷನ್ ಸ್ಟೋರ್ಸ ನಡೆಸುತ್ತೇನೆ. ನನಗೆ ಪ್ರತಿವಾದಿಗಳ ಜೊತೆ ವ್ಯವಹಾರ ಪ್ರಾರಂಭ ಮಾಡುವ ಮೊದಲು ಎಲೆಕ್ಟ್ರಾನಿಕ್ಸ ವ್ಯವಹಾರದಲ್ಲಿ ಅನುಭವ ಇರಲಿಲ್ಲ. ಆ ಬಗ್ಗೆ ವಾದಪತ್ರದಲ್ಲಿ ನಮೂದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ಸಂಸ್ಥೆಯವರು ಬಂದು ಹೇಳಿದ್ದರಿಂದ ದಿನಾಂಕ 29.12.2019 ರಂದು ಅಗ್ರಿಮೆಂಟ್ ಮಾಡಿಕೊಂಡಿದ್ದೇನೆ. ನಾನು ಎಲೆಕ್ಟ್ರಾನಿಕ್ಸ ವ್ಯವಹಾರ ಮಾಡಲು ಪಾಲಿಕೆಯಿಂದ ಲೈಸೆನ್ಸ ಪಡೆದಿರುತ್ತೇನೆ. ಎಲೆಕ್ಟ್ರಾನಿಕ್ಸ ವ್ಯವಹಾರ ಮಾಡಲು ನನ್ನ ಬಳಿ ಸ್ವಂತ ಜಾಗ ಇರಲಿಲ್ಲ. ಬಾಡಿಗೆಗೆ ಕಟ್ಟಡ ಪಡೆದು ವ್ಯಾಪಾರ ಪ್ರಾರಂಭಿಸಿದೆ. ನನಗೆ ಪ್ರಾವಿಷನ್ ಸ್ಟೋರ್ಸನಲ್ಲಿ ಅನುಭವ ಇದುದ್ದರಿಂದ ಪ್ರತಿವಾದಿಯರು ಅವರೇ ಸಿಬ್ಬಂದಿಗಳನ್ನು ನೇಮಿಸಿ ಎಲೆಕ್ಟ್ರಾನಿಕ್ಸ ವ್ಯವಹಾರಕ್ಕೆ ಸಹಾಯ ಮಾಡುವುದಾಗಿ ಹೇಳಿದರು. ಬ್ಯಾಂಕಿನಿಂದ ಸಾಲ ಕೊಡಿಸುವುದಾಗಿ ಪ್ರತಿವಾದಿ ಸಂಸ್ಥೆಯವರು ಪತ್ರ

ನೀಡಿದ್ದರು ಮತ್ತು ಆ ಬಗ್ಗೆ ಅಗ್ರಿಮೆಂಟಿನಲ್ಲಿ ಸಹ ನಮೂದಿಸಿದ್ದರು. ಆ ಅಗ್ರಿಮೆಂಟನ್ನು ಹಾಜರುಪಡಿಸಿರುತ್ತೇನೆ. ಬ್ಯಾಂಕಿನವರು ನನ್ನ ಸಿಬಿಲ್ ಸ್ಕೋರನ್ನು ನೋಡಿ ಸಾಲ ನೀಡುತ್ತಾರೆ ಎಂದರೆ ನಿಜ. ಪ್ರತಿವಾದಿಗಳು ಇಂತಹ ದಿನವೇ ಬ್ಯಾಂಕಿನಿಂದ ಸಾಲ ಕೊಡಿಸುತ್ತೇವೆ ಮತ್ತು ನಾವೇ ಸಾಲ ಮರು ಪಾವತಿ ಮಾಡುತ್ತೇವೆ ಎಂದು ಒಪ್ಪಂದ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಆ ಬಗ್ಗೆ ಅಗ್ರಿಮೆಂಟಿನಲ್ಲಿ ನಮೂದಿಲ್ಲ ಎಂದರೆ ಸರಿಯಲ್ಲ. ನಾನು ಈ ಕೇಸಿನಲ್ಲಿ ಹಾಜರುಪಡಿಸಿರುವ ಎಲ್ಲ ದಾಖಲೆಗಳನ್ನು ಚಿಕ್ಕಬಳ್ಳಾಪುರ ನ್ಯಾಯಾಲಯದ ಓ.ಎಸ್ 383/2022 ರಲ್ಲಿ ಹಾಜರುಪಡಿಸಿದ್ದೆ ಎಂದರೆ ನಿಜ. ಆ ದಾವೆಯಲ್ಲಿ ಈ ದಾವೆಯ ಪ್ರತಿವಾದಿಯು ಪಕ್ಷಕಾರರಲ್ಲ ಎಂದರೆ ಸರಿಯಲ್ಲ. ಆ ದಾವೆಗೂ ಮತ್ತು ನಾನು ಹಾಜರುಪಡಿಸಿರುವ ದಾಖಲೆಗಳಿಗೂ ಪ್ರತಿವಾದಿಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಫ್ರಾಂಚೈಸಿ ಅಗ್ರಿಮೆಂಟ್ ಕಲಂ 9 ರ ಪ್ರಕಾರ ಫ್ರಾಂಚೈಸಿ ಮಾಲೀಕರ ಯಾವುದೇ ನಷ್ಟಕ್ಕೆ ಪ್ರತಿವಾದಿಯರು ಜವಬ್ದಾರರಲ್ಲ ಎಂದರೆ ಸರಿಯಲ್ಲ. ಫ್ರಾಂಚೈಸಿ ಅಗ್ರಿಮೆಂಟ್ ಪ್ರಕಾರ ಲಾಕಿನ್ ಅವಧಿಯಲ್ಲಿ ಅಗ್ರಿಮೆಂಟನ್ನು ರದ್ದುಪಡಿಸಲು ಬರುವುದಿಲ್ಲ ಎಂದರೆ ನಿಜ. ನಾನು ಸರಿಯಾದ ಸಮಯಕ್ಕೆ ಅಂಗಡಿಯನ್ನು ತೆಗೆಯದೇ ನಿರ್ಲಕ್ಷತನದಿಂದ ವ್ಯಾಪಾರ ಮಾಡಿದ್ದರಿಂದ ನನಗೆ ನಷ್ಟವಾಗಿದೆ ಎಂದರೆ ಸರಿಯಲ್ಲ. ನಾನು ಅಂಗಡಿಯನ್ನು ಸರಿಯಾಗಿ ನಡೆಸದಿದ್ದರೂ ಸಹ ನನಗೆ ಸಹಾಯ ಮಾಡುವ ಸಲುವಾಗಿ ಪ್ರತಿವಾದಿಯರು ಬ್ಯಾಂಕಿಗೆ ಕಂಫರ್ಟ ಲೆಟರನ್ನು ನೀಡಿರುತ್ತಾರೆ ಎಂದರೆ

ಸರಿಯಲ್ಲ. ನಾನು ಪಡೆದ ಸಾಲಕ್ಕೆ ನಾನೇ ಜವಬ್ದಾರ ಎಂದರೆ ಸರಿಯಲ್ಲ. ಬ್ಯಾಂಕಿನಲ್ಲಿ ನನ್ನ ಅಂಗಡಿಯ ಹೆಸರಿನಲ್ಲಿ ಸಾಲ ನೀಡಿರುತ್ತಾರೆ. ಆ ಸಾಲ ತೀರಿಸಲು ನಾನೇ ಜವಬ್ದಾರ ಎಂದರೆ ಸರಿಯಲ್ಲ. ಅಂಗಡಿಯನ್ನು ಪ್ರಾರಂಭಿಸಲು ಪ್ರತಿವಾದಿಯರು ಹಣ ಖರ್ಚು ಮಾಡಿದ ಬಗ್ಗೆ ಎಲ್ಲ ದಾಖಲೆಯನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಹೇಳುತ್ತಾರೆ 4,25,000/- ರೂ.ಗಳ ಬಿಲ್ ಮಾತ್ರ ನೀಡಿರುತ್ತಾರೆ. ನಾನು ಮಾರಾಟ ಮಾಡಿದ ಬಗ್ಗೆ ದಾಖಲೆಗಳಿವೆ. ಗ್ರಾಹಕರು ಆನ್‌ಲೈನಿನಲ್ಲಿ ಪಾವತಿ ಮಾಡಿದಕ್ಕೆ ಕಂಪ್ಯೂಟರಿನಲ್ಲಿ ವಿವರ ಲಭ್ಯವಿರುತ್ತದೆ. ನನ್ನ ಅಂಗಡಿಯ ಎಲ್ಲ ಖರ್ಚು ವೆಚ್ಚಗಳಿಗೆ ನಾನೇ ಜವಬ್ದಾರನಿದ್ದೇನೆ ಎಂದರೆ ನಿಜ. ನಾನು ನೀಡಿದ ಪರ್ಚೆಸ್ ಆರ್ಡರುಗಳ ಹಣ ಪಾವತಿ ಮಾಡದಿದ್ದರಿಂದ ಪ್ರತಿವಾದಿಗಳು ನನಗೆ ಸರಕು ಸರಬರಾಜು ಮಾಡಿಲ್ಲ ಎಂದರೆ ಸರಿಯಲ್ಲ. ಆ ಹಣ ಪಾವತಿಸಿದ ಬಗ್ಗೆ ದಾಖಲೆ ಹಾಜರುಪಡಿಸಿದ್ದೇನೆ. ನಾನು ಅಂಗಡಿಯನ್ನು ಸರಿಯಾಗಿ ನಡೆಸದೇ ನಷ್ಟ ಮಾಡಿಕೊಂಡು ಫ್ರಾಂಚೈಸಿ ರದ್ದುಪಡಿಸಲು ಕೋರಿದ್ದೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಅಂಗಡಿಯನ್ನು ಮುಚ್ಚುವಂತೆ ತಿಳಿಸಿಲ್ಲ ಎಂದರೆ ಅವರು ಸಿಸ್ಟಂನ್ನು ಬ್ಲಾಕ್ ಮಾಡಿದ್ದರಿಂದ ಅಂಗಡಿಯನ್ನು ಮುಚ್ಚಿದ್ದೇನೆ. ನಾನು ನನಗೆ ನಷ್ಟವಾಗಿದೆ ಎಂದು ಹಾಜರುಪಡಿಸಿರುವ ಸ್ಟೇಟಮೆಂಟನ್ನು ನಾನೇ ತಯಾರಿಸಿದ್ದೇನೆ ಎಂದರೆ ಸರಿಯಲ್ಲ.

ಈ ವೇಳೆಗೆ ಪ್ರತಿವಾದಿ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸೂಕ್ತ ಕಾರಣವಿಲ್ಲದ್ದರಿಂದ ಮುಂದುವರೆದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ತ ನ್ಯಾಯಾಧೀಶರು
ಮೈಸೂರು